ಏನು ಮಾಡಲು ಸಾಧ್ಯ? ಚತುರ್ವೇದಿಯವರು ಮತ್ತು ಲತಾ ಪಾಂಡೆ ತಡರಾತ್ರಿಯವರೆಗೆ ಜೊತೆಯಲ್ಲಿರುತ್ತಿದ್ದರು, ನಂತರವಷ್ಟೇ ಚತುರ್ವೇದಿಯವರು ತಮ್ಮ ಮನೆಗೆ ಮರಳಿ ಹೋಗುತ್ತಿದ್ದರು. ಚತುರ್ವೇದಿಯವರು ಚತುರರಾಗಿದ್ದರು. ಅವರು ಪ್ರೇಯಸಿಯ ಪ್ರೇಮರಸವನ್ನು ಸಹ ತೆಗೆದುಕೊಳ್ಳುತ್ತಿದ್ದರು ಹಾಗೂ ತಮ್ಮ ಕುಟುಂಬದೊಂದಿಗೂ ಕಲೆತಿದ್ದರು. ಎರಡು ದೋಣಿಗಳಲ್ಲಿ ಕಾಲಿಟ್ಟಿದ್ದಾಗ್ಯೂ ಸುರಕ್ಷಿತರಾಗಿದ್ದರು; ಎಷ್ಟಾದರು ಪುರುಷರಾಗಿದ್ದರಲ್ಲ! ಇದಕ್ಕೆ ವಿರುದ್ಧವಾಗಿ ಅವರು ಲತಾ ಪಾಂಡೆ ತಮಗೆ ಮಾತ್ರ ಸಮರ್ಪಿತಳಾಗಿರಬೇಕು, ಅವಳು ಅತ್ತ ಇತ್ತ ನೋಡಲೂಬಾರದು ಎಂದು ಬಯಸುತ್ತಿದ್ದರು. ಲತಾ ಪಾಂಡೆ ಸಹ ಅವರಿಗೆ ಮಾತ್ರವೇ ಸಮರ್ಪಿತರಾಗಿದ್ದರು. ಕೆಲವು ವರ್ಷಗಳ ನಂತರ ಇಬ್ಬರೂ ಬೇರೆಬೇರೆಯಾದರು.

ಕಾರಣವಿಷ್ಟೆ: ಚತುರ್ವೇದಿಯವರಿಗೆ ಹೊಸ ವಿದ್ಯಾರ್ಥಿನಿಯೊಬ್ಬಳು ಇಷ್ಟವಾಗಿದ್ದಳು. ಅವರು ಲತಾ ಪಾಂಡೆಯವರ ಮನೆಯನ್ನು ಹೊಸ ವಿದ್ಯಾರ್ಥಿನಿ ಭೇಟಿಯಾಗುವ ಸ್ಥಳವಾಗಿ ಉಪಯೋಗಿಸಿಕೊಳ್ಳಲು ಬಯಸುತ್ತಿದ್ದರು. ಇದಕ್ಕೆ ಲತಾ ಪಾಂಡೆ ಪ್ರತಿವಾದ ಮಾಡಿದರು. ಇದರಿಂದಾಗಿ ಇಬ್ಬರ ಸಂಬಂಧ ಮುರಿದು ಹೋಯಿತು. ಈ ವಿಷಯ ಸುಮಾರಾಗಿ ನನ್ನ ಅಪ್ಪನ ವಿಷಯದಂತಿತ್ತು. ಆದರೆ ಚತುರ್ವೇದಿಯವರು ತಮ್ಮ ಹೆಂಡತಿಯನ್ನು ನಿಭಾಯಿಸುತ್ತಿದ್ದರೆ, ಚತುರ್ವೇದಿಯವರ ಹೆಂಡತಿ ಚತುರ್ವೇದಿಯವರನ್ನು ನಿಭಾಯಿಸುತ್ತಿದ್ದಳು! ಇಬ್ಬರಲ್ಲಿ 'ಅಗಲುವಿಕೆ' ಆಗಲಿಲ್ಲ. ಲತಾ ಪಾಂಡೆಯವರ ಪ್ರಶ್ನೆ ಬಂದಾಗ ಜನ, 'ಅವಳಿಗೇನು, ಚತುರ್ವೇದಿ ಇಲ್ಲದಿದ್ದರೆ ಇನ್ನಾರೋ, ಅವರಿಲ್ಲದಿದ್ದರೆ ಇನ್ನೊಬ್ಬರು, ಇನ್ನೊಬ್ಬರಿಲ್ಲದಿದ್ದರೆ, ಬೇರೊಬ್ಬರು' ಎಂದು ಮಾತನಾಡುತ್ತಿದ್ದರು. ಮಹಿಳೆಯರಿಗೆ ಇಂಥ ಮಾತುಗಳನ್ನು ಸಹಜವಾಗಿ ಹೇಳಲಾಗುತ್ತದೆ; ಆದರೆ ಮಹಿಳೆಯರಿಗೆ ತಮಗೆ ಪ್ರಿಯರಾದವರನ್ನು ಪದೇ ಪದೇ ಬದಲಿಸುವುದು ಸಾಧ್ಯವಾಗುವುದಿಲ್ಲ.



ಈ ಘಟನೆಯ ನಂತರ ಚತುರ್ವೇದಿಯವರು ತಮ್ಮ ಹೊಸ ಪ್ರೇಯಸಿ ಮತ್ತು ತಮ್ಮ ಹಳೆಯ ಕುಟುಂಬದಲ್ಲಿ ಮುಳುಗಿ ಹೋದರು; ಆದರೆ ಲತಾ ಪಾಂಡೆ ಒಂಟಿಯಾದರು. ಒಂದು ವೇಳೆ ಅವರು ವಿವಾಹಿತೆಯಾಗಿದ್ದರೆ, ಮಗುವಿನ ತಾಯಿಯಾದ ನಂತರ ಪರಿತ್ಯಕ್ತೆಯಾಗುತ್ತಿದ್ದರು, ಆಗ ಬಹುಶಃ ಅವರು ತಮ್ಮ ಮಗುವಿನ ಆಸರೆಯೊಂದಿಗೆ ಬದುಕುತ್ತಿದ್ದರು. ಆದರೆ ಅವರು ವಿಧಿವತ್ತಾಗಿ ಚತುರ್ವೇದಿಯವರಿಗೆ ಏನೂ ಆಗಿರಲಿಲ್ಲ. ಅವರು ಅನೇಕ ಬಾರಿ ಗರ್ಭಪಾತವನ್ನು ಮಾಡಿಸಿಕೊಂಡರು, ಆದರೆ ಒಂದು ಬಾರಿ ಸಹ ಮಗುವಿಗೆ ಜನ್ಮ ಕೊಡಲು ಸಾಧ್ಯವಾಗಿರಲಿಲ್ಲ. ಒಬ್ಬರ ಪ್ರೇಯಸಿಯಾಗಿ ಅವರೊಂದಿಗೆ ಜೀವನ ಸಾಗಿಸುವ ಧೈರ್ಯ ಅವರಲ್ಲಿತ್ತು, ಆದರೆ 'ಅವಿವಾಹಿತ ತಾಯಿ'ಯಾಗುವ ಸಾಹಸ ಅವರಿಗಿರಲಿಲ್ಲ. ಚತುರ್ವೇದಿಯವರು ಅವರಿಗೆ ಲೈಂಗಿಕ ಸುಖವನ್ನು ಕೊಡುತ್ತಾ ಎಲ್ಲಾ ವಿಧದ ಪಿಸುಮಾತುಗಳನ್ನು ಸಹಿಸಿದರು. ಆದರೆ ಚತುರ್ವೇದಿಯವರು ಮಾತೃತ್ವಸುಖವನ್ನು ಕೊಡುವ ಧೈರ್ಯವನ್ನು ಮಾಡದಾದರು. ಚತುರ್ವೇದಿಯವರಿಗೆ ಅವರ ಮಗ ಮಗಳಿದ್ದರು. ಹೀಗಾಗಿ ಅವರಿಗೆ ಯಾವುದೇ ಕೊರತೆ ಕಾಡಲಿಲ್ಲ. ಆದರೆ ಲತಾ ಪಾಂಡೆ ಈ ಕೊರತೆಯ ಪರವಾಗಿ, ಬಲವಾಗಿ ನಿಲ್ಲದಾದರು. ಅವರು ಚತುರ್ವೇದಿಯವರಿಂದ ಬೇರೆಯಾದ ನಂತರ ಘೋರ ಖಿನ್ನತೆಗೆ ಬಲಿಯಾದರು.

ಲತಾ ಪಾಂಡೆಯವರ ನೆನಪಾದ ಕೂಡಲೇ ನನಗೆ ಭಯವಾಗುತ್ತದೆ. ನಾನು ಸಹ ಇದೇ ರೀತಿಯ ಭವಿಷ್ಯದೆಡೆಗೆ ಸಾಗುತ್ತಿರುವೆನೇ? ಅಥವಾ ನಾನು ರಿತಿಕ್‌ನಿಂದ ಮಾತೃತ್ವದ ನನ್ನ ಅಧಿಕಾರವನ್ನು ಪಡೆಯಲು ಸಾಧ್ಯವೇ? ನನಗೆ ಈ ಧೈರ್ಯವಿದೆಯೇ? ನಾನು ನನ್ನನ್ನೇ ಪ್ರಶ್ನೆ ಮಾಡಿಕೊಳ್ಳುತ್ತೇನೆ. ನನ್ನ ಭವಿಷ್ಯದ ಸುರಕ್ಷತೆಗಾಗಿ ಮಗುವೊಂದಕ್ಕೆ ಜನ್ಮ ಕೊಡುವುದು ಸಾಧ್ಯವೇ? ಹಾಗೂ ಆ ಮಗುವನ್ನು ಅವಿವಾಹಿತೆ ತಾಯಿಯ ಮಗುವಾಗಿ ಈ ಸಮಾಜವೆಂಬ ಕಾಡಿನಲ್ಲಿ, ಸಮಾಜದ ಗುತ್ತಿಗೆದಾರರಂಥ ಕ್ರೂರ ಪಶುಗಳ ನಡುವೆ ಬದುಕಲು ವಿವಶಗೊಳಿಸುವುದು ಉಚಿತವಾಗುವುದೇ ಎಂದೂ ಅನ್ನಿಸುತ್ತಿತ್ತು. ರಿತಿಕ್ ಈ ರೀತಿ ಯೋಚಿಸಿದ್ದನೋ, ಇಲ್ಲವೋ ನನಗೆ ತಿಳಿದಿಲ್ಲ; ಆದರೆ ನಾನಿದನ್ನು ಅನೇಕ ಬಾರಿ ಯೋಚಿಸಿದ್ದೇನೆ. ನಾವು ವಿವಾಹ ಮಾಡಿಕೊಳ್ಳದೆ ಜೊತೆಗಿರುವ ಯೋಗ್ಯ ಮಾನಸಿಕತೆಗೆ ಬಂದಿದ್ದೇವೆಯೇ? ನಾವು ಜೊತೆಗಿದ್ದು ಮಗುವನ್ನು ಹೆರುವ ಮಾನಸಿಕತೆ ಬಹು ದೂರವಿದೆ ಎಂದು ಅನ್ನಿಸಿದಾಗ, ನಾವು ಸಾಮಾಜಿಕ ಪ್ರಗತಿಯ ಯಾವ ಆಯಾಮದಲ್ಲಿದ್ದೇವೆ ಎಂದು ಭ್ರಮೆಗೊಳಗಾಗುತ್ತಿದ್ದೆ. ಉದಾಹರಣೆಗೆ, ಒಬ್ಬ ಬದುಕಲು ಬಯಸುತ್ತಾನೆ, ಆದರೆ ಉಸಿರಾಡಲು ಹೆದರುತ್ತಾನೆ ಎಂದಾಗಿತ್ತು ನನ್ನ ಪರಿಸ್ಥಿತಿ.

ಫ್ರೆಂಚ್ ಲೇಖಕಿ ಸಿಮೋನ್ ದ ಬೋವುವಾರ್, ಮಹಿಳೆಯರ ಸ್ವಾತಂತ್ರ್ಯದ ಬಗೆಗಿನ ಆವಿಷ್ಕಾರದಲ್ಲಿ ತನ್ನಿಡೀ ಜೀವನವನ್ನು ಕಳೆದಳು ಎಂದು ನಾನೆಲ್ಲೋ ಓದಿದ್ದೆ. ಅವಳು ತನ್ನ ಪ್ರಿಯಕರನೊಂದಿಗಿದ್ದಳು. ಆದರೆ ಅವಳು ತನ್ನ ಪ್ರಿಯಕರ ಜ್ಯಾಂ ಪಾಲ್ ಸಾತ್ರನ ವಿವಾಹಪ್ರಸ್ತಾವವನ್ನು ತಿರಸ್ಕರಿಸಿದಳು, ಆದರೂ ಜೊತೆಗಿದ್ದಳು. ಅವಳು ಬೇರೆ ಪುರುಷನೆಡೆಗೂ ಆಕರ್ಷಿತಳಾದಳು, ಬೇರೆ ಪುರುಷನನ್ನು ಸಹ ಪ್ರೀತಿಸಿದಳು, ಆದರೂ ಸಾತ್ರನೊಂದಿಗಿದ್ದಳು. ನಾನು ಹೀಗೆ ಮಾಡಲು ಸಾಧ್ಯವೇ? ಇಲ್ಲ, ರಿತಿಕ್ ಸಹಿಸುವುದಿಲ್ಲ. ಮಹಿಳೆಗೆ ಸ್ವಾತಂತ್ರ್ಯ ಬೇಕಾದರೆ ಅವಳು ಪುರುಷನ ಕ್ರೋಧವನ್ನು ನೋಡಿಯೂ ನೋಡದಂತಿರಬೇಕು ಎಂದು ಬೋವುವಾರ್ ಹೇಳಿದ್ದು ಉಚಿತವೇ ಆಗಿತ್ತು. ಹೀಗೆ ಮಾಡುವುದು ನನಗೆ ಕಷ್ಟವಾಗಿದೆ. ನಾನು ರಿತಿಕ್‌ನನ್ನು ವಿವಾಹವಾಗುವ ಇಚ್ಛೆಯನ್ನು ಬೆಳೆಸಿಕೊಳ್ಳಲಿಲ್ಲ. ನಮ್ಮ ಭಾರತೀಯ ವಾತಾವರಣದಲ್ಲಿ, ನಮ್ಮ ಮನಸ್ಸುಬುದ್ಧಿಯಲ್ಲಿ ಪರಂಪರೆಗಳನ್ನು ತುರುಕಲಾಗುತ್ತದೆ; ಇದರಿಂದಾಗಿ ಒಳಿತುಕೆಡುಕುಗಳನ್ನು ಆಯ್ಕೆ ಮಾಡಿಕೊಳ್ಳುವ ಕಲೆಯನ್ನು ನಾವು ಮರೆತು ಬಿಟ್ಟಿರುತ್ತೇವೆ. ಇಲ್ಲಿ ಮುಚ್ಚಿದ ಬಾಗಿಲುಗಳ ಹಿಂದಾಗುವ ಪ್ರತಿಕೂಲ ಸಂಬಂಧಗಳು ಮಾನ್ಯತೆಯನ್ನು ಪಡೆಯುತ್ತವೆ, ಬಹಿರಂಗವಾಗಿ ಬೀದಿಯಲ್ಲಾಗುವ ಅನುಕೂಲ ಸಂಬಂಧಗಳು ಮಾನ್ಯತೆಯನ್ನು ಪಡೆಯುವುದಿಲ್ಲ.

ನಾವು ಅಂದರೆ ರಿತಿಕ್, ನಾನು ಮತ್ತು ಮಿತ್ರರೊಂದಿಗೆ ಭೇಡಾಘಾಟಕ್ಕೆ ಹೋದ ಆ ದಿನ ನನಗಿಂದೂ ನೆನಪಿದೆ. ಮಿತ್ರರುಗಳಲ್ಲಿ ಪ್ರೇರಣಾ, ಶಿವಾ, ರೋಹಿಣಿ, ಮೋಹನ ಮತ್ತು ವಿಶಾಲ್ ಇದ್ದರು. ಭೇಡಾಘಾಟಿನ ಉಕ್ಕುವ ಜಲಪಾತದ ಸೌಂದರ್ಯವನ್ನು ನೋಡಿ, ನಾನು ಸಮ್ಮೋಹನಕ್ಕೊಳಗಾಗಿದ್ದೆ. ನಾನು ಅದನ್ನು ನೋಡಿದಾಗಲೆಲ್ಲಾ ಮೊದಲ ಬಾರಿಗೆ ನೋಡಿದಂತೆ ಹೊಸದಾಗಿ ಕಾಣಬರುತ್ತದೆ. ನೀರಿನ ಸತತ ಪ್ರವಾಹ ನನ್ನನ್ನು ಸದಾ ರೋಮಾಂಚನಗೊಳಿಸುತ್ತದೆ. ಅದು ನನಗೆ ಜೀವನ ಗತಿಶೀಲವಾಗಿದೆ ಎಂಬುದರ ಅರಿವು ಮೂಡಿಸುತ್ತದೆ. ಜಲಪಾತದಿಂದ ಹಾರಿ ಬರುವ ನೀರಿನ ಶೀತಲ ಹನಿಗಳು ಮನಸ್ಸನ್ನು ಶಾಂತಗೊಳಿಸುತ್ತವೆ. ಅಂದು ನನ್ನ ಮನಸ್ಸು ಸಹ ನಿರೀಕ್ಷೆಗಿಂತ ಹೆಚ್ಚು ಶಾಂತವಾಗಿತ್ತು. ನಾನು ಜಲಪಾತದ ಪ್ರವಾಹ ಮತ್ತು ನೀರಿನ ಶೀತಲ ಹನಿಗಳ ಆನಂದವನ್ನು ಮನಸಾರೆ ಅನುಭವಿಸಿದೆ. ಅಂದೇಕೋ ಪ್ರೇರಣಾ ನನಗೆ ಪದೇಪದೇ ನಾನು ವಿವಾಹಿತೆ ಅಲ್ಲ ಎಂದು ಮನದಟ್ಟು ಮಾಡಲು ಬಯಸುತ್ತಿದ್ದಳು. ಅವಳು ನನಗೆ ಎರಡು ಮೂರು ಬಾರಿ 'ಅತ್ತಿಗೆ' ಎಂದು ಕರೆದು, ಪ್ರತಿ ಬಾರಿಯೂ 'ಸಾರಿ' ಎಂದು ಹೇಳಿ, ನನ್ನನ್ನು ನನ್ನ ಹೆಸರಿನಿಂದ ಕರೆದಿದ್ದಳು, ಇದನ್ನು ಬಹುಶಃ ರಿತಿಕ್ ಸಹ ಗಮನಿಸಿರಬೇಕು. ರಿತಿಕ್ ಅವಳಿಗೆ ಸಹೋದರನ ಸಮನಾಗಿದ್ದ, ಆದರೆ ನಾನು ಅತ್ತಿಗೆಯ ಸಮನಾಗಿರಲಿಲ್ಲ, ಏಕೆಂದರೆ ನಾನು